ಪುಣ್ಯಪ್ರಾಪ್ತಿಗಾಗಿ! ಸ್ಥಂಭಕ್ಕೆ ಬಿಗಿದ ಬೃಹತ್ ಗಂಟೆಗಳಲ್ಲಿ ಐತಿಹ್ಯಗಳ ಲಿಪಿಗಳಿವೆ. ಪ್ರವಾಸಿ ತಾಣಗಳಾದ್ದರಿಂದ 'ಸಂತೆ'ಗಳು ಅಧಿಕ. ಸರ, ಮಣಿಸರ, ಸ್ಮರಣಿಕೆಗಳ ಮಾರಾಟ. ಜಾಣ್ಮೆಯ ವ್ಯಾಪಾರಿ ತಂತ್ರಗಳು. ಬುದ್ಧ ಮತ್ತು ಆತನ ವಿಚಾರಗಳ ಅರಿವಿದ್ದರೆ ಮಾತ್ರ ಈ ಕ್ಷೇತ್ರದ ಇತಿಹಾಸಗಳು ಅರ್ಥವಾದೀತು. ಬಡತನ–ಶ್ರೀಮಂತಿಕೆಗಳ ಅಂತರವು ಜನಜೀವನದತ್ತ ಹೊರಳಿದಾಗ ಅಲ್ಲಿಯೂ ಗೋಚರ.

ಕಠ್ಮಂಡುವಿನಿಂದ ಗೋರ್ಖಾ ಹಾದಿಯಲ್ಲಿ ನೂರಿಪ್ಪತ್ತೈದು ಕಿಲೋಮೀಟರ್ ದೂರದಲ್ಲಿ 'ಮನಕಾಮನಾ' ದೇವಿಯ ದೇವಸ್ಥಾನ. ಸುಮಾರು ನಾಲ್ಕು ಗಂಟೆ ಪಯಣ. ಮನದ ಕಾಮನೆಯನ್ನು ಪರಿಹರಿಸುವ ದೇವಿ ಎಂಬ ನಂಬುಗೆ. ದೇವಸ್ಥಾನವು ನೆಲಮಟ್ಟದಿಂದ ಸುಮಾರು ಒಂದು ಸಾವಿರದ ನೂರು ಅಡಿ ಎತ್ತರದಲ್ಲಿದೆ. ರೋಪ್‌ವೇ ಮೂಲಕ ಸಂಚರಿಸುವ ಮೂವತ್ತಕ್ಕೂ ಹೆಚ್ಚು ಕೇಬಲ್‌ಕಾರುಗಳು ಪ್ರವಾಸಿಗರನ್ನು ಹೊತ್ತೊಯ್ಯುತ್ತದೆ. ಸುಮಾರು ಇನ್ನೂರೈವತ್ತು ಅಡಿ ಮೇಲ್ಪಟ್ಟದಲ್ಲಿ, ಕಡಿದಾದ ಬೆಟ್ಟಗಳನ್ನು ಏರಿ ಸಾಗುವ ಪಯಣ ರೋಚಕ. ಕೆಳ ನೋಡಿದರೆ ಪ್ರಪಾತ! ಸುಮಾರು ಹದಿನೇಳನೇ ಶತಮಾನದಲ್ಲಿ ದೇವಾಲಯ ನಿರ್ಮಾಣವಾಗಿದೆ ಎನ್ನಲಾಗಿದೆ. ಇಲ್ಲಿ ಪ್ರಾಣಿಬಲಿಯ 'ಸೇವೆ' ಎದ್ದು ಕಾಣುತ್ತವೆ. ಅಲ್ಲಿನ ನಾಲ್ಕೈದು ಕಿತ್ತಳೆ ಮರಗಳಲ್ಲಿ ತೂಗುತ್ತಿರುವ ಕಿತ್ತಳೆ ಹಣ್ಣು ಸಹಜವೋ, ನಕಲಿಯೋ... ಮನದೊಳಗೆ ಹುದುಗಿದ್ದ ಗುಮಾನಿ ಬೀಜ ಮೊಳಕೆಯೊಡೆಯಲಿಲ್ಲ!


ಗುಪ್ತೇಶ್ವರ ಮಹಾದೇವ ಗುಹೆಯ ಪ್ರವೇಶ ದ್ವಾರ

## ಖುಷಿಯನ್ನು ಕಸಿದ ಮಳೆ

ಪ್ರವಾಸಿ ತಾಣ ಪೋಕರಾ. ಇಲ್ಲಿಗೆ ಭೇಟಿ ನೀಡದೆ ಪ್ರವಾಸ ಮುಗಿಯುವುದಿಲ್ಲವಂತೆ. ಅಷ್ಟೊಂದು ಸುಂದರ ಪ್ರದೇಶ. ಈ ನಗರವು ಗಂಡಕೀ ನದಿಯ ತಟದಲ್ಲಿದೆ. 'ಹಿಮಾಲಯದ ಹಿಮಾಚ್ಛಾದಿತ ದೃಶ್ಯವನ್ನು ಹತ್ತಿರದಿಂದ ನೋಡಬಹುದು' ಎನ್ನುವುದು ನಿರೀಕ್ಷೆ. ಆದರೆ ಪೋಕರಾ ತಲಪುವಾಗ ಸಂಜೆಯಾಗಿತ್ತು. ಮಳೆ ಶುರುವಾಗಿತ್ತು. ವಿದ್ಯುತ್ ಕೈಕೊಟ್ಟಿತ್ತು. ಆಸಕ್ತಿಯು ತಣ್ಣೀರಿನಿಂದ ತೋಯ್ದು ಹೋಗಿತ್ತು.

ಪೋಕರಾದ 'ಫೆವಾ ಸರೋವರ' ಪ್ರಸಿದ್ಧ. ಸುಮಾರು ನಾಲ್ಕೈದು ಕಿಲೋಮೀಟರ್ ವ್ಯಾಪ್ತಿ. ಎರಡು ಕಿಲೋಮೀಟರ್ ಅಗಲವಿರಬಹುದು. ಇದರಲ್ಲಿ ಬೋಟಿಂಗ್ ಮಾಡಲು ಪ್ರವಾಸಿಗರಿಗೆ ಖುಷಿ. ತುಂತುರು ಮಳೆಯು ಬೋಟಿಂಗ್ ಮನಸ್ಥಿತಿಗೆ ಬ್ರೇಕ್ ಹಾಕಿತ್ತು. ಸರೋವರದ ಮಧ್ಯದಲ್ಲಿ ಪುಟ್ಟ ದ್ವೀಪ. ಅದರಲ್ಲಿ ವಾರಾಹಿ ದೇವಿಯ ಮಂದಿರ. ಸ್ಥಳದ ಮಹಾತ್ಮೆ ಅರಿವಿದ್ದ ನೇಪಾಳಿಗರು ಪೋಕರಾಗೆ ಬಂದಾಗ ದೇವಿಯ ದರ್ಶನ ಮಾಡಿಯೇ ಸಾಗುತ್ತಿದ್ದರು.

ಬೋಟಿಂಗಿಗೆ ನಿಗದಿತ ಶುಲ್ಕವಿದೆ. ಓರ್ವ ಚಾಲಕನಿದ್ದಾನೆ. ಅಭ್ಯಾಸವಿದ್ದರೆ ಪ್ರವಾಸಿಗರೂ ಬೋಟಿಂಗ್ ಮಾಡಲು ಅವಕಾಶವಿದೆ. ಜೊತೆಯಲ್ಲಿದ್ದ ರಾಮಪ್ರಸಾದ್ ಕೇರಳದ ದೋಣಿ ಓಟ ಸ್ಪರ್ಧೆಯ ಸಂದರ್ಭದಲ್ಲಿ ಹಾಡುವ ಮಲೆಯಾಳಿ ಹಾಡಿನೊಂದಿಗೆ ಬೋಟಿಂಗಿಗೆ ತೊಡಗಿದರು. ಇವರ ಹಾಡಿನ ಭಾವ ಅರ್ಥವಾಗದಿದ್ದರೂ, ಲಯಕ್ಕೆ ನೇಪಾಳಿ ನಾವಿಕರು ಉತ್ಸುಕರಾಗಬೇಕೇ! ಅಲ್ಲಿನ ಪಾರಂಪರಿಕ ಹಾಡನ್ನು ಅವರೂ ಹಾಡಿ ಒಂದರ್ಧ ಗಂಟೆ ಹೊಸ ಲಹರಿಯನ್ನು ಸೃಷ್ಟಿಸಿದರು. ಬೆಳಗ್ಗಿನ ಹೊತ್ತಾದ ಕಾರಣ ವಾರಾಹಿ ದೇವಿಯ ದರ್ಶನ ಸುಲಭವಾಯಿತು. ಪ್ರಾಚೀನ 'ಡೇವಿಸ್ ಫಾಲ್ಸ್' ಇನ್ನೊಂದು ಪ್ರೇಕ್ಷಣೀಯ ಸ್ಥಳ. 1961ನೇ ಇಸವಿ. ಸ್ವಿಸ್ ಪ್ರಜೆ ಡೇವಿಸ್ ತಮ್ಮ ಪತಿಯೊಂದಿಗೆ ಜಲಪಾತ ವೀಕ್ಷಣೆ ಬಂದಿದ್ದರಂತೆ. ಅಲ್ಲಿ ಪ್ರಪಾತಕ್ಕೆ ಬಿದ್ದು ಡೇವಿಸ್ ಮೃತಪಟ್ಟಿದ್ದರು. ಅವರ ನೆನಪಿಗಾಗಿ ಜಲಪಾತಕ್ಕೆ ಡೇವಿಸ್ ಹೆಸರು ಹೊಸೆಯಿತು. 'ಪ್ರಪಾತ ಪ್ರದೇಶಕ್ಕೆ ಇಳಿಯಬೇಡಿ' ಎನ್ನುವ ಪರೋಕ್ಷ ಸೂಚನೆಯೂ ಈ ಹೆಸರಿನಲ್ಲಡಗಿದೆ. ಪ್ರಾಕೃತಿವಾಗಿ ರೂಪುಗೊಂಡ ಜಲಪಾತವು ನೂರಡಿ ಆಳವಿದೆ.

ವರುಷಪೂರ್ತಿ ನೀರಿನ ಹರಿವು. ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳಲ್ಲಿ ಜಲಪಾತವು ರಮಣೀಯ. 'ಗುಪ್ತೇಶ್ವರ ಮಹಾದೇವ ಗುಹೆ' ತುಂಬಾ ಪ್ರಾಚೀನ. ಪ್ರವೇಶ ದ್ವಾರವೇ ಅರಮನೆಯನ್ನು ಹೋಲುತ್ತಿತ್ತು. ಕೆಳಗಿಳಿದಂತೆ ಕಿರಿದಾಗುವ ದಾರಿ. ತುಂತುರು ಮಳೆಯಿಂದಾಗಿ ಮೆಟ್ಟಿಲುಗಳೆಲ್ಲಾ ಒದ್ದೆಯಾಗಿದ್ದು ಜಾರುವ ಭಯವೂ ಇತ್ತು.


ಮನಕಾಮನಕ್ಕೆ ಕೇಬಲ್ ಕಾರಿನ ರೋಚಕ ಪಯಣ